# ‘ನದಿ, ಕೆರೆ ಪಶ್ಚಿಮಘಟ್ಟದ ಉಳಿವಿಗೆ ವಿಶೇಷ ಕೊಡುಗೆ ನೀಡುತ್ತಿವೆ’

*ಶಿರಸಿ ಬ್ಯೂರೋ ವರದಿ*

ಶಿರಸಿ : ನದಿಗಳು, ಕೆರೆಗಳು ಪಶ್ಚಿಮಘಟ್ಟದ ಉಳಿವಿಗೆ ವಿಶೇಷ ಕೊಡುಗೆ ನೀಡುತ್ತಿವೆ. ಕೆರೆಗಳ ಜಲಾನಯನ ರಕ್ಷಣೆಗೆ ಕೈಗೊಂಡಿರುವ ಜನಜಾಗೃತಿ ಅಭಿಯಾನದಲ್ಲಿ ರೈತರು, ವಿದ್ಯಾರ್ಥಿಗಳು ಎಲ್ಲೆಡೆ ಪಾಲ್ಗೊಳ್ಳುವಂತಾಗಬೇಕು ಎಂದು ಪರಿಸರ ವಿಜ್ಞಾನಿ ಡಾ ಟಿ ವಿ ರಾಮಚಂದ್ರ ಕರೆ ನೀಡಿದರು.



ವೃಕ್ಷಲಕ್ಷ ಆಂದೋಲನದ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಮಾತನಾಡಿರುವುದು

ಶನಿವಾರ ತಾಲೂಕಿನ ಶೀಗೇಹಳ್ಳಿ ಪರಮಾನಂದ ಮಠದ ಪುಣ್ಯತೀರ್ಥದ ಪರಿಸರದಲ್ಲಿ ನಡೆದ ಮಲೆನಾಡು ಕೆರೆ ಸಂರಕ್ಷಣಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.

ಜೀವವೈವಿಧ್ಯ ದಾಖಲಾತಿ ತಜ್ಞ ಡಾ ಹರೀಶ ಭಟ್, ದೇವಸ್ಥಾನಗಳ ಪುಷ್ಕರಣಿ ವರ್ಷಪೂರ್ತಿ ಜಲಸಮೃದ್ಧಿಯಿಂದ ಕೂಡಿರಬೇಕು. ಮಾಲಿನ್ಯ ಮುಕ್ತವಾಗಿರಬೇಕು ಎಂದು ಅಭಿಪ್ರಾಯಪಟ್ಟರು. ಅಧ್ಯಕ್ಷತೆ ವಹಿಸಿದ್ದ ವೃಕ್ಷಲಕ್ಷ ಆಂದೋಲನದ ಅಧ್ಯಕ್ಷ ಅನಂತ ಹೆಗಡೆ ಆಶೀಸರ, ಗಂಗಾಪೂಜೆಯೊಂದಿಗೆ ಆರಂಭವಾದ ಕೆರೆ ಉಳಿಸಿ ಅಭಿಯಾನದ ಉದ್ದೇಶ ವ್ಯಾಪಕ ಜಲ ಜಾಗೃತಿ ಎಂದರು.

ಸ್ವರ್ಣವಲ್ಲೀ ಮಠದ ಉಪಾಧ್ಯಕ್ಷ ವಿಘ್ನೇಶ್ವರ ಹೆಗಡೆ ಬೊಮ್ಮನಳ್ಳಿ, ಅರಣ್ಯ ಸಮಿತಿ ಅಧ್ಯಕ್ಷ ವಿಶ್ವನಾಥ ಹೆಗಡೆ ಮಾತನಾಡಿದರು. ಪರಮಾನಂದ ಮಠದ ಚಂದ್ರಮೌಳೇಶ್ವರ ಹೆಗಡೆ ಸ್ವಾಗತಿಸಿದರು. ವೃಕ್ಷಲಕ್ಷ ಆಂದೋಲನದ ಗಣಪತಿ ಕೆ ಬಿಸಲಕೊಪ್ಪ ನಿರ್ವಹಿಸಿದರು.

ಕೆರೆ ಉಳಿಸಿ ಬೀದಿನಾಟಕದ ಪ್ರದರ್ಶನ ಶೀಗೇಗಳ್ಳಿ ಪ್ರಾಥಮಿಕ ಶಾಲಾ ಮಕ್ಕಳಿಂದ ನಡೆಯಿತು. ಸಂಜೆ ಅಧ್ಯಯನ ವರದಿ ಮಂಡನೆ, ಚರ್ಚೆ, ನಿರ್ಣಯ ಸಮಾರೋಪ ನಡೆಯಿತು. ವಿದ್ಯಾರ್ಥಿಗಳ ಕೆರೆ, ಬೆಟ್ಟ- ಗುಡ್ಡಗಳ ಓಡಾಟ, ಮಾಹಿತಿ ಸಂಗ್ರಹ, ವರದಿ ಮಂಡನೆ ಬಗ್ಗೆ ವಿಜ್ಞಾನಿಗಳು ವಿಶೇಷ ಮೆಚ್ಚುಗೆ ವ್ಯಕ್ತಪಡಿಸಿದರು.